# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮನೆಘಟ್ಟ

ಮುಖ್ಯ ಶಿಕ್ಷಕರು 2016–17ನೇ ಸಾಲಿನಲ್ಲಿ, ಶಾಲಾ ಶೈಕ್ಷಣಿಕ ನಾಯಕತ್ವದ ತರಬೇತಿ (SLDP) ಪಡೆದ ನಂತರದಲ್ಲಿ ನಮ್ಮ ಶಾಲೆಯನ್ನು ಶೈಕ್ಷಣಿಕವಾಗಿ ಅಭಿವೃದ್ಧಿ ಮಾಡುವ ದೃಷ್ಟಿಯಿಂದ ಎಲ್ಲಾ ಶಿಕ್ಷಕವೃಂದ ಶ್ರಮಿಸುತ್ತಿದೆ ಹಾಗೂ ಅಭವೃದ್ಧಿ ಪಥದತ್ತ ಸಾಗುತ್ತಿದೆ. ನಾವು ಏನನ್ನಾದರೂ ಸಾಧಿಸಬೇಕಾದರೆ ಕನಸು ಹಾಗೂ ದೂರದೃಷ್ಟಿಯ ಗುರಿಯನ್ನು ಇಟ್ಟುಕೊಂಡು ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವುದರ ಮೂಲಕ ಶಾಲಾ ಪರಿಸರ ಉತ್ತಮಪಡಿಸಲು ಸಮುದಾಯದ ಪಾಲ್ಗೊಳ್ಳುವಿಕೆ ಬೇಕಾಗುತ್ತದೆ. ಅಂತ ಪರಿಸರ ನಿರ್ಮಾಣವಾಗುತ್ತಿದೆ. ಇದಕ್ಕೆಲ್ಲ ಸಹಕರಿಸಿದ ಪೋಷಕವೃಂದ, ಎಸ್.ಡಿ.ಎಮ್.ಸಿ. ಹಾಗೂ ಸಂಪನ್ಮೂಲ ವ್ಯಕ್ತಿಗಳು, ಬಿ.ಆರ್.ಸಿ., ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಇವರಿಗೆಲ್ಲ ಧನ್ಯವಾದಗಳನ್ನು ಅರ್ಪಿಸುತ್ತೇವೆ.

## "ಹುಟ್ಟಿನಿಂದ ಪಶು, ಸಾಧನೆಯಿಂದ ಮಾನವ"

ನಮ್ಮ ಶಾಲೆಯ ಶಿಕ್ಷಕವೃಂದ, ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ಶಾಲಾ ಅಭಿವೃದ್ಧಿ ಹಾಗೂ ಮೇಲುಸ್ತುವಾರಿ ಸಮಿತಿ, ವಿದ್ಯಾರ್ಥಿ ವೃಂದ ಮನೆಘಟ್ಟ ಗ್ರಾಮಸ್ಥರು ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಸಹಕರಿಸಿದ ಎಲ್ಲಾ ಮಿತ್ರರಿಗೂ ನಮ್ಮ ಶಾಲೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.


## ಶಾಲಾ ಪರಿಸರ ದಿನಾಚರಣೆ






1. ಶ್ರೀಮತಿ ವಿನ್ನಿಫ್ರೈಡ್ ಮರಿಯಾ ಕಾರ್ಡಿನ್. ಸ.ಶಿ.
2. ಶ್ರೀಮತಿ ಸರೋಜಮ್ಮ ಹೆಚ್.ಆರ್., ಬ.ಮು.ಸಿ.
3. ಸಂತಾನ್ ಡಿ.ಸೋಜ, ಸ.ಶಿ.
4. ಪ್ರಮೀಳಾ ಎನ್.ವಿ. ಸ.ಶಿ.
5. ಶ್ರೀ ಉಮೇಶ ಬಿ.ಜಿ. ಸ.ಶಿ.

## ಶಾಲಾ ಕೈತೋಟ ಮಾಡುವುದಕ್ಕಿಂತ ಮೊದಲಿದ್ದ ಆವರಣ



2017–18ನೇ ಶೈಕ್ಷಣಿಕ ಸಾಲಿನಲ್ಲಿ ಶಾಲಾ ಕೈ ತೊಟವನ್ನು ನಮ್ಮ ಶಾಲಾ ಆವರಣದಲ್ಲಿ ಖಾಲಿ ಇರುವ ಜಾಗವನ್ನು ನಾವು ಏನನ್ನಾದರೂ ಮಾಡಿ ಒಂದು ಉತ್ತಮ ಶಾಲಾ ಕೈತೋಟ ಮಾಡಬೇಕೆಂಬ ಮಹಾದಾಸೆಯಿಂಧ ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು ಹಾಗೂ ಪೋಷಕ ವರ್ಗ, ಶಿಕ್ಷಕವರ್ಗದವರು ಸೇರಿ ಕೈತೋಟ ಮಾಡಬೇಕಂದು ತೀರ್ಮಾನಿಸಿ ಮೆಮೋಗಳನ್ನು ನೀಡುವುದರ ಮೂಲಕ ಪೋಷಕ ವರ್ಗ, ವಿದ್ಯಾರ್ಥಿ ವೃಂದ, ಎಲ್ಲರೂ ಸೇರಿ ಕೈತೋಟ ಮಾಡುವ ನಿರ್ಣಯ ಕೈಗೊಳ್ಳಲಾಯಿತು.

## ಪೋಷಕರು, ವಿದ್ಯಾರ್ಥಿಗಳು ಮತ್ತು ಶಿಕ್ಷಕರು ವೃಂದ



## ಕೈತೋಟ ಮಾಡಿದ ನಂತರದ ದೃಶ್ಯ





ಮೊದಲು ನಾವು ಹೊಸನಗರ ತಾಲ್ಲೂಕಿನ ಬೀದರಳ್ಳಿ ಮತ್ತು ಸಮಟಗಾರ ಶಾಲೆಗಳಿಗೆ ಎಸ್.ಡಿ.ಎಂ.ಸಿ. ಸಮಿತಿ, ಶಾಲಾ ಶಿಕ್ಷಕ ವೃಂದ ಸೇರಿ ಸಂದರ್ಶಿಸಿದೆವು. ನಮ್ಮ ಶಾಲೆಯಲ್ಲಿ ಪೋಷಕ, ವಿದ್ಯಾರ್ಥಿಗಳ ಸಹಾಯದಿಂದ ಶಾಲಾ ಕೈತೋಟ ನಿರ್ಮಾಣ ಮಾಡಲಾಯಿತು.

ಸ.ಹಿ.ಪ್ರಾ.ಶಾಲೆ ಮನೆಘಟ್ಟದಲ್ಲಿ ಖಾಲಿ ಇದ್ದ ಜಾಗವನ್ನು ಎಲ್ಲಾ ಪೋಷಕ ವರ್ಗದವರು ಕೈತೋಟದಲ್ಲಿ ಸಸಿಗಳನ್ನು ನೆಡುವುದರ ಮೂಲಕ ಕೈತೋಟವನ್ನು ನಿರ್ಮಾಣ ಮಾಡಿದರು. ಹಳೆ ವಿದ್ಯಾರ್ಥಿಗಳು, ಊರಿನ ಪೊಷಕರು ಹೂಕುಂಡಗಳನ್ನು ನೀಡುವುದುರ ಮೂಲಕ ತಮ್ಮ ನೆಚ್ಚಿನ ಶಾಲೆಯನ್ನು ಸುಂದರಗೊಳಿಸಿದ್ದಾರೆ.

ಪೋಷಕ ವರ್ಗದವರು ಗುಲಾಬಿ ಗಿಡ, ಅಡಿಕೆ ಸಸಿ, ದಾಸವಾಳ ಹಾಗೂ ಬಾಳೆ ಹಣ್ಣಿನ ಗಿಡಗಳನ್ನು ನೆಡುವುದರ ಮೂಲಕ ಶಾಲಾ ಆವರಣವನ್ನು ಸುಂದರಗೊಳಿದ್ದಾರೆ. ಅವರಿಗೆಲ್ಲಾ ಶಾಲಾ ಶಿಕ್ಷಕ ಹಾಗೂ ಎಸ್.ಡಿ.ಎಂ.ಸಿ. ಸಮಿತಿಯವರು ಧನ್ಯವಾದಗಳನ್ನು ಸಲ್ಲಿಸಿರುತ್ತಾರೆ. ಇದಕ್ಕೆಲ್ಲ ಎಸ್.ಡಿ.ಎಂ.ಸಿ. ಅಧ್ಯಕ್ಷರು, ಸದಸ್ಯರು, ಶಿಕ್ಷಕವರ್ಗ, ವಿದ್ಯಾರ್ಥಿವೃಂದ, ಪೋಷಕ ವರ್ಗದವರು ಸಹಕರಿಸಿರುತ್ತಾರೆ.

ಹಾಗೂ ನಮ್ಮ ಶಾಲೆಯ ಮುಂಭಾಗದಲ್ಲಿ ದೊಡ್ಡ ದೊಡ್ಡ ಮೆಟ್ಟಿಲುಗಳಿದ್ದು ವಿದ್ಯಾರ್ಥಿಗಳಿಗೆ, ಅಂಗವಿಕಲರಿಗೆ ಶಾಲೆಗೆ ಬರಲು ತುಂಬಾ ತೊಂದರೆಯಾಗುತ್ತಿತ್ತು. ಹಾಗಾಗಿ ಗ್ರಾಮ ಪಂಚಾಯ್ತಿ ಮಾಸೂರು ವತಿಯಿಂದ ಅತ್ಯುತ್ತಮವಾದ ರ್‍ಯಾಂಪ್‌ನ್ನು ಮಾಡಿಸಿಕೊಟ್ಟಿರುತ್ತಾರೆ. ಅವರಿಗೆ ನಮ್ಮ ಶಾಲಾವತಿಯಿಂದ ಎಸ್.ಡಿ.ಎಂ.ಸಿ. ವತಿಯಿಂದ ಧನ್ಯವಾದಗಳನ್ನು ಅರ್ಪಿಸುತ್ತೇವೆ.

## ಶಾಲಾ ಕಾಂಪೌಂಡ್ ಮೇಲೆ ಚಿತ್ರಿಸಿದ ಶೈಕ್ಷಣಿಕ ಚಿತ್ರಗಳು




ಪೋಷಕವರ್ಗ, ಹಳೆ ವಿದ್ಯಾರ್ಥಿಗಳು ಹಾಗೂ ದಾನಿಗಳ ಸಹಾಯದಿಂದ ಗೋಡೆ ಬರಹಗಳನ್ನು ಕಾಂಪೌಂಡ್ ಮೇಲೆ ಚಿತ್ರಗಳನ್ನು ಬರೆಸಿರುವ ದೃಶ್ಯಗಳು.



# ಲೋಟಸ್ ಕವಾಯತ್



ಸರ್ಕಾರಿ ಶಾಲೆಯಲ್ಲಿ ದಾಖಲಾತಿ ಹೆಚ್ಚಿಸುವ ದೃಷ್ಟಯಿಂದ ವಿದ್ಯಾರ್ಥಿಗಳು ಶಿಕ್ಷಕರು ಗ್ರಾಮದ ರಾಜ ಬೀದಿಯಲ್ಲಿ ದಾಖಲಾತಿ ಆಂದೋಲನ ನಡೆಸಲಾಯಿತು



## ಪ್ರತಿ ವರ್ಷ ಜರುಗುವ ಮಕ್ಕಳ ಸಂತೆ





ಮಕ್ಕಳಿಗೆ ಲಾಭ ನಷ್ಟ ಪರಿಕಲ್ಪನೆ ಮೂಡಿಸಲು ಪ್ರತಿ ವರ್ಷ ಶಾಲಾ ಆವರಣದಲ್ಲಿ ಮಕ್ಕಳ ಸಂತೆ ಏರ್ಪಡಿಸಲಾಗುತ್ತದೆ. ಭಾಗವಹಿಸಿದ ಬಿ.ಆರ್.ಪಿ. ಗಳಾದ ಶ್ರೀ ಈಶ್ವರಪ್ಪರವರು ಹಾಗೂ ಸಿ.ಆರ್.ಪಿ.ಗಳಾದ ಶ್ರೀ ಕಿರಣ್‌ಕುಮಾರ್ ಹಾಗೂ ಸಿಬ್ಬಂದಿ ವರ್ಗ ಸ.ಹಿ.ಪ್ರಾ.ಶಾಲೆ. ಮನೆಘಟ್ಟ.

## ಸಾಮೂಹಿಕ ಕವಾಯತ್ ಗಣರಾಜ್ಯೋತ್ಸವ





ದಿನಾಂಕ 26–01–2018ರಂದು ನಡೆದ ಗಣ ರಾಜ್ಯೋತ್ಸವದ ಪ್ರಯುಕ್ತ ನಡೆಸಿದ ಕಾರ್ಯಕ್ರಮಗಳು ಪಿರಾಮಿಡ್ ಸಾಮೂಹಿಕ ಕವಾಯತ್ ಲೋಟಸ್, ಡಂಬಲ್ಸ್, ಲೇಜೀಮ್ ಕಾಟಿ.

ಶಾಲಾ ವಾರ್ಷಿಕೋತ್ಸವ

2017–18 ನೇ ಸಾಲಿನಲ್ಲಿ ಶಾಲಾ ಮಕ್ಕಳ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಶಾಲಾ ಎಲ್ಲಾ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗಹಿಸಿ ತಮ್ಮ ರಂಗಕಲೆ, ನೃತ್ಯ, ಪ್ರಹಸಗಳು, ಪೌರಾಣಿಕ ನಾಟಕಗಳನ್ನು ಅಭಿನಯಿಸಿದರು. ಇದಕ್ಕೂ ಮೊದಲು ಕಾರ್ಯಕ್ರಮ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಿದ ಶ್ರೀಯುತ ಮಂಜಪ್ಪನವರು, ಜಿಲ್ಲಾ ಪಂಚಾಯತ್ ಸದಸ್ಯರು ಃಆಗೂ ಶ್ರೀಯುತ ಹೊಳೆಯಪ್ಪನವರು ಎ.ಪಿ.ಎಂ.ಸಿ,. ಅಧ್ಯಕ್ಷರು, ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀಯುತ ಮಹಾಬಲ, ಎಸ್.ಡಿ.ಎಂ.ಸಿ. ಅಧ್ಯಕ್ಷರಾದ ಶ್ರೀ ಗಣಪತಿ ಎಂ.ಆರ್., ಎಸ್.ಡಿ.ಎಂ.ಸಿ. ಉಪಾಧ್ಯಕ್ಷರಾದ ಶ್ರೀಮತಿ ವೀಣಾ, ಉಮೇಶ ಬಿ.ಜಿ., ಸಿಆರ್.ಪಿಗಳಾದ ಶ್ರೀ ಕಿರಣ್‌ಕುಮಾರ್, ಬಿಆರ್.ಪಿಗಳಾದಶ್ರೀ ಈಶ್ವರಪ್ಪನವರನ್ನು ಕಾಣಬಹುದಾಗಿದೆ.

ದಿನಾಂಕ 26–01–2018 ರಂದು ನಡೆದ ಶಾಲಾ ವಾರ್ಷಿಕೋತ್ಸದಲ್ಲಿ ಸುಮಾರು ಅಕ್ಕ– ಪಕ್ಕದ ಗ್ರಾಮದ ಜನರು ಸೇರಿದ್ದು ಮಕ್ಕಳು ನಾನಾ ವಿಧದ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದ್ದು ಅಂಗನವಾಡಿ ಮಕ್ಕಳಿಂದ ವಿವಿಧ ಆಕರ್ಷೀಯ ನೃತ್ಯಗಳು, ಬಬ್ರುವಾಹನದ ಪೌರಾಣಿಕ ನಾಟಕಗಳು ಜಾನಪದ ನೃತ್ಯ, ಏಕಪಾತ್ರಾಭಿನಯ ಹಾಸ್ಯಗಳು, ಮೂಕಾಭಿನಯ ಹಾಗೂ ಆಟಗಳಲ್ಲಿ ಗೆದ್ದಂತಹ ಮಕ್ಕಳಿಗೆ ಬಹುಮಾನಗಳನ್ನು ಹಳೆ ವಿದ್ಯಾರ್ಥಿಗಳಿಗೂ ಆಟೋಟಗಳಲ್ಲಿ ಭಾಗವಹಿಸಿ ಗೆದ್ದಂತಹವರಿಗೆ ಬಹುಮಾನಗಳನ್ನು ನೀಡಲಾಯಿತು. ದಾನಿಗಳಿಗೂ ಬಿಸಿಯೂಟದವರಿಗೆ ನೆನಪಿನ ಕಾಣೀಕೆಗಳನ್ನು ನೀಡಿ ಸನ್ಮಾನಿಸಲಾಯಿತು. ಪೋಷಕರು ಶಾಲೆಯಲ್ಲಿ ನಡೆಸಿದ ಕಾರ್ಯಕ್ರಮ ಹಾಗೂ ಮಕ್ಕಳಲ್ಲಿ ಕಲಿಕೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

## ವಾರ್ಷಿಕೋತ್ಸದಲ್ಲಿ ನೃತ್ಯ ತಂಡ



ಶಾಲಾ ವಾರ್ಷಿಕೋತ್ಸವದಲ್ಲಿ ಶಾಲಾ ಮಕ್ಕಳಿಂದ ಜಾನಪದ ನೃತ್ಯ ಪ್ರದರ್ಶಿಸಲಾಯಿತು. ಮಕ್ಕಳಿಗೆ ಶಿಕ್ಷಕ ವೃಂದ ಕಲಿಕೆಯ ಜೊತೆಗೆ ಸಹ ಪಠ್ಯಕ್ಕೆ ಹಾಗೂ ಕ್ರೀಡೋತ್ಸವಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದು ಮಕ್ಕಳಲ್ಲಿ ಅಡಗಿರುವ ಪ್ರತಿಭೆಗಳನ್ನು ಹೊರ ತರಲು ಶಿಕ್ಷಕ ವೃಂದ ಯಶಸ್ವಿಯಾದರು.

# ಸಾಂಸ್ಕೃತಿಕ ಕಾರ್ಯಕ್ರಮ





ಸ್ವದೇಶಿ ವಸ್ತುಗಳನ್ನು ಬಳಸಿ ವಿದೇಸಿ ವಸ್ತುಗಳನ್ನು ಬಹಿಸ್ಕರಿಸಿ ಎನ್ನುವ ಚಳುವಳಿಯ ದೃಶ್ಯವನ್ನು ವಿದ್ಯಾರ್ಥಿಗಳು ಅಭಿನಯಿಸಿ ತೋರಿಸುತ್ತಿರುವ ದೃಶ್ಯ. 7ನೇ ತರಗತಿಯಿಂದ ವಿದ್ಯಾರ್ಥಿಗಳಿಂದ.

## ಭತ್ತ ನಾಟಿ ಮಾಡಿಸುವ ದೃಶ್ಯ



ನಮ್ಮ ಶಾಲಾ ಮಕ್ಕಳು ಹಾಗೂ ಶಿಕ್ಷಕವರ್ಗದವರು ಸ್ಥಳೀಯ ಗದ್ದೆಯಲ್ಲಿ ಭತ್ತ ನಾಟಿ ಮಾಡುವುದರ ಮೂಲಕ ನಾಟಿ ಮಾಡುವ ಪರಿಕಲ್ಪನೆಯನ್ನು ಮಕ್ಕಳಲ್ಲಿ ಮೂಡಿಸಲಾಯಿತು. ಚಿತ್ರದಲ್ಲಿ ಮುಖ್ಯಶಿಕ್ಷಕರು, ಸಹಶಿಕ್ಷಕರು, ವಿದ್ಯಾರ್ಥಿಗಳನ್ನು ಕಾಣಬಹುದು. ಹಾಗೂ ಮಕ್ಕಳಿಗೆ ತಮ್ಮ ವ್ಯಕ್ತಿತ್ವದ ಬೆಳವಣಿಗೆ ಕೇವಲ ಶಾಲೆಯಿಂದಲ್ಲ ಮನೆ ಇತರರ ಒಡನಾಡ ಪರಿಸರ ಮಾಧ್ಯಮಗಳಿಂದ ಜೀವನದ ಪಾಠವನ್ನು ಕಲಿಯುತ್ತಾ ಕಲಿಕೆಗೆ ಪೂರಕವಾಗುವಂತೆ ಶಾಲೆಯಲ್ಲಿ ಗುರುಗಳಿದ್ದಂತೆ. ಶಾಲೆಯ ಹೊರಗೂ ಹಲವು ಗುರುಗಳು ನಮಗಿರುತ್ತಾರೆ. ಅವರೆಲ್ಲರ ಕೊಡುಗೆಯಿಂದ, ಬೋಧನೆಯಿಂದ ನಾವೆಲ್ಲ ಬೆಳೆಯುತ್ತಾ ಹೋಗುತ್ತೇವೆ. ಎಂಬುವುದು ಮಕ್ಕಳಲ್ಲಿ ಮನವರಿಕೆ ಮಾಡಲಾಯಿತು.

## ವಸ್ತುಗಳ ರೂಪದಲ್ಲಿ ಕೊಟ್ಟಂತಹ ದಾನಿಗಳು

| ಕ್ರ.ಸಂ | ವಸ್ತುಗಳ ಹೆಸರು | ದಾನಿಗಳ ಹೆಸರು |
|---|---|---|
| 1 | ಬಾವಿಗೆ ಇಳಿಸುವ 1ಹೆಚ್.ಪಿ. ಮೋಟರ್. (ಅಂದಾಜು ಬೆಲೆ 8000/–) | ಪ್ರಕಾಶ್ ಮತ್ತು ಸಹೋದರರು, ಮನೆಘಟ್ಟ |
| 2 | ಹೂವಿನ ಗಿಡಗಳನ್ನು ನೆಡಲು ಪಾಟ್ 10 | ವೆಂಕಟಗಿರಿ ಬಿನ್ ಶಂಕರಮೂರ್ತಿ |
| 3 | 100 ಅಡಿ ಪ್ಲಾಸ್ಟಿಕ್ ನೀರಿನ ಪೈಪ್ | ಪ್ರಕಾಶ್ ಕೆ. ಮಾಜಿ. ಗ್ರಾಮ ಪಂಚಾಯ್ತಿ, ಅಧ್ಯಕ್ಷರು, ಮಾಸೂರು |
| 4 | ಕಂಬದಿಂದ ಶಾಲೆಗೆ ಎಳೆಸಲು ಮೈನ್ಸ್ ವೈಯರ್ | ಭರತಪ್ಪ ಮತ್ತು ಮಕ್ಕಳು, ಮನೆಗಟ್ಟ |
| 5 | 1 ಲೋಡ್ ಟ್ರ್ಯಾಕ್ಟರ್ ಮಣ್ಣು ಶಾಲಾ ಕೈತೋಟಕ್ಕೆ | ವೀರಭದ್ರ ಮನೆಘಟ್ಟ |
| 6 | ಸಿಮೆಂಟಿನ ಸೀಟ್ 2 | ಶ್ರೀನಾಥ ಹೆಗಡೆ ಮಾಸೂರು |
| 7 | ಬಿಸಿಯೂಟಕ್ಕೆ ಈಳಿಗೆ ಮಣೆ | ಗಿರೀಸ್ ಮಾಸೂರು |
| 8 | ಮೈಕ್‌ಸೆಟ್ ತರಲು ಗ್ರಾಮದವರು | 10,000/– ರೂ.ಗಳನ್ನು ಕೊಟ್ಟಿರುತ್ತಾರೆ. |
| 9 | ಗಡಿಯಾರ (ಗೋಡೆ) | ಶ್ರೀಮತಿ ನಾಗರತ್ನ ಗುಡ್ಡೇಕೇರಿ |
| 10 | ಕೆರೆಸ್ವಾಮಿ ಗುಡ್ಡೇಕೇರಿ | 10 ಹೂವಿನ ಗಿಡಗಳನ್ನು ನೆಡಲು ಪಾಟ್ |

2017–18 ನೇ ಸಾಲಿನಲ್ಲಿ ಮೇಲ್ಕಂಡ ವಸ್ತುಗಳನ್ನು ಶಾಲೆಗೆ ಕೊಟಿರುತ್ತಾರೆ. ಇವರೆಲ್ಲರಿಗೂ ನಮ್ಮ ಶಾಲೆಯ ಎಸ್.ಡಿ.ಎಂ.ಸಿ. ಅಧ್ಯಕ್ಷರು ಸದಸ್ಯರು ಶಿಕ್ಷಕ ವೃಂದದವರಿಂದ ಧನ್ಯವಾದಗಳನ್ನು ಅರ್ಪಿಸುತ್ತೇವೆ.